SRI M.S.KRISHAN.—Can you not get it examined before evening ?

SRI M. MALLIKAKJUNA KHARGE.—Examination question is not there.

SRI M. S. KRISHNAN.—By evening it can be examined and tell us. That portion of the discussion will go off.

ಶ್ರೀ ಎಚ್. ಡಿ. ದೇವೇಗೌಡ. ನಾಳೆ ಕೂಡ ನಾನು ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ಇದರ ಬಗ್ಗೆ ಮಾನ್ಯ ಖರ್ಗೆಯವರು ಕೊಟ್ಟ ಸಲಹೆ ಮೇಲೆ ನಾನು ಎಕ್ಸಾಮಿನ್ ಮಾಡಿ ನಿರ್ಣಯ ಮಾಡುತ್ತೇನೆಂದು ಮಾನ್ಯ ಸಭಾನಾಯಕರು ಹೇಳಿದರು. ನಾಳೆಯಾಗದಿದ್ದರೆ ಇನ್ನೂ ಒಂದು ದಿವಸ ಅವಕಾಶವನ್ನು ತೆಗೆದುಕೊಳ್ಳಲಿ. ಸೋಮವಾರದವರೆಗೆ ಕಾನೂನು ಪಂಡಿತರ ಜೊತೆ ಚರ್ಚೆ ಮಾಡಿ ವರದಿಯನ್ನು ಇಡುತ್ತಾರೋ ಇಲ್ಲವೋ ಹೇಳಲಿ.

ಅಧ್ಯಕ್ಷರು.—ಸೋಮವಾರ ಬೇಡ, ನಾಳೆಯೇ ಆಗಲಿ.

ಶ್ರೀ ಎಚ್. ಡಿ. ದೇವೇಗೌಡ.—ರಿಪೋರ್ಟ್ ಇಡಬೇಕೇ ಬೇಡವೇ ಎನ್ನುವ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಖರ್ಗೆಯವರ ಸಲಹೆಯನ್ನು ಎಕ್ಸಾಮಿನ್ ಮಾಡುತ್ತೇನೆಂದು ಅವರು ಹೇಳಿದ್ದಾರೆ. ಅವರು ಅದನ್ನು ಎಕ್ಸಾಮಿನ್ ಮಾಡಲಿ, ಕಾನೂನು ಪಂಡಿತರನ್ನು ಕೇಳಲಿ. ಅಧಿಕಾರಿಗಳನ್ನು ಕೇಳಲಿ. ನಾಳೆ ಅವರು ಹೇಳುವುದು ಬೇಡ, ಇನ್ನೂ ಒಂದು ದಿವಸ ರಜ ಇರುತ್ತದೆ. ಮೂರು ದಿವಸ ಚರ್ಚೆಸಿ ವರದಿಯನ್ನು ಇಡುತ್ತಾರೋ ಇಲ್ಲವೋ ಎಂಬುದನ್ನು ಸೋಮವಾರ ನೋಡೋಣ. ಅವರು ಇಡುವುದಿಲ್ಲವೆನ್ನುವುದಾದರೆ ಅದನ್ನು ಏಕೆ ಇಡಬೇಕೆಂದು ನಾನು ಸೋಮವಾರ ಹೇಳುತ್ತೇನೆ.

೧–೩೦ ಪಿ. ಎಂ.

ಗಮನ ಸೆಳೆಯುವ ಸೂಚನೆ.

Sub.–Regarding the recent attrocities committed on SCs people in Karnataka particularly at Tungagere, Ganajalakhed Algude and Amruthur.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ. ಇತ್ತೀಚೆಗೆ ತುಂಗಗೆರೆ ಗಣಜಲಖೇಡ್, ಅಲಗುಡ್ಡೆ ಹಾಗೂ ಅಮೃತೂರು ಮುಂತಾದ ಕಡೆಗಳಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ನಡೆದ ದೌರ್ಜನ್ಯಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—ಅಧ್ಯಕ್ಷರೇ, ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ದಲಿತರ ದುರ್ಬಲ ವರ್ಗದವರ ಮೇಲಿನ ದೌರ್ಜನ್ಯ ಪ್ರಕರಣಗಳು ಬಹಳ ಕಡಿಮೆ. ದೌರ್ಜನ್ಯ ನಡೆದ ಪ್ರಕರಣಗಳಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ದೌರ್ಜನ್ಯ ಎಸಗಿದ ಸವರ್ಣೀಯರ ಮೇಲೆ ಅಪರಾಧದ ಮೊಕದ್ದಮೆಯನ್ನು ನೋಂದಾಯಿಸಿ ತನಿಖೆ ನಡೆಸಿ ಆರೋಪಿಗಳನ್ನು ದಸ್ತಗಿರಿ ಮಾಡಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಾರೆ. ಈ ಮೊಕದ್ದಮೆಗಳಲ್ಲಿ ನ್ಯಾಯಾಲಯಗಳು ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು. ದೌರ್ಜನ್ಯದ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಲ್ಲಿ ಪ್ರಾಣ ಕಳೆದುಕೊಂಡ ಅವಲಂಬಿಗಳಿಗೆ ಹಾಗೂ ದೈಹಿಕವಾಗಿ ತೊಂದರೆ ಅನುಭವಿಸಿದವರಿಗೆ ಹಾಗೂ ಆಸ್ತಿಪಾಸ್ತಿಗಳ ನಷ್ಟ ಅನುಭವಿಸಿದವರಿಗೆ ನಿಗದಿತ ದರದಲ್ಲಿ ಪರಿಹಾರ ನೀಡಲಾಗುವುದು. ಇತ್ತೀಚೆಗೆ ಯಾವ ಸ್ಥಳದಲ್ಲಿ ದುರ್ಬಲ ವರ್ಗದವರ ಮೇಲೆ ಸವರ್ಣೀಯರು ದೌರ್ಜನ್ಯ ನಡೆಸುತ್ತಾರೆಯೋ ಅಂತಹ ಸ್ಥಳಗಳಿಗೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ಭೇಟಿ ನೀಡುವುದರೊಂದಿಗೆ ಪರಿಸ್ಥಿತಿಯ ಬಗ್ಗೆ ನಿಗಾವಹಿಸುವುದಲ್ಲದೆ ಸೂಕ್ತ ಪೋಲೀಸ್ ಬಂದೋಬಸ್ತನ್ನು ಏರ್ಪಡಿಸಲಾಗುತ್ತಿದೆ. ಮತ್ತು ಪರಿಸ್ಥಿತಿಯ ಬಗ್ಗೆ ಆಗಾಗ್ಗೆ ಮೇಲಾಧಿಕಾರಿಯವರಿಗೆ ವರದಿ ಮಾಡುವಂತೆ ತಿಳುವಳಿಕೆ ಕೊಡಲಾಗಿದೆ. ದೌರ್ಜನ್ಯ ನಡೆದ ಸ್ಥಳಗಳಲ್ಲಿ ಪೋಲೀಸ ಹಿರಿಯ ಅಧಿಕಾರಿಗಳು ಹಾಗೂ ಸಮಾಜ ಕಲ್ಯಾಣ ಅಧಿಕಾರಿಗಳು ಪ್ರಜಾರ ಕಾರ್ಯ ಏರ್ಪಡಿಸುವುದರೊಂದಿಗೆ ದುರ್ಬಲ ವರ್ಗದವರಿಗೆ ಸಂವಿಧಾನದ ಹಕ್ಕುಭಾದ್ಯತೆಗಳ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ. ಮತ್ತು ದುರ್ಬಲ ವರ್ಗದವರ ಮೇಲೆ ದೌರ್ಜನ್ಯ ನಡೆಸಿದ ಸವರ್ಣೀಯರಿಗೆ ಆಗುವ ಶಿಕ್ಷೆಯ ಬಗ್ಗೆ ಎಚ್ಚರಿಕೆ ಕೊಡಲಾಗುತ್ತಿದೆ. ಇತ್ತೀಚೆಗೆ ಯಾವ ಸ್ಥಳದಲ್ಲಿ

ದುರ್ಬಲ ವರ್ಗದವರ ಮೇಲೆ ದೌರ್ಜನ್ಯ ನಡೆಯುತ್ತಿದೆಯೋ ಆ ಸ್ಥಳಗಳಲ್ಲಿ ಪುಂಡು ಗಂದಾಯ ವಿಧಿಸಲು ಪರಿಶೀಲಿಸಲಾಗುತ್ತಿದೆ. ಇತ್ತೀಚೆಗೆ ಚಿಂಚೋಳಿ, ಮಂಡ್ಯ ಜಿಲ್ಲೆಯ ಕೆರಗೋಡು, ಹಲ್ಲೆಗೆರೆ ಮುಂತಾದ ಸ್ಥಳಗಳಲ್ಲಿ ದಲಿತರ (ದುರ್ಬಲ ವರ್ಗದವರ) ಮೇಲೆ ಸ್ಥಳೀಯ ಪೋಲೀಸ್ ಠಾಣೆಗಳಲ್ಲಿ ಅಪರಾಧದ ಮೊಕದ್ದಮೆಗಳನ್ನು ನೋಂದಾಯಿಸಿ ಅಪರಾಧಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ತನಿಖೆ ನಡೆಸಲಾಗುತ್ತಿದೆ. ಗುಲ್ಬರ್ಗಾದ ಗಣಜಲ್–ಖೇಡ್‌ನಲ್ಲಿ ಪರಿಶಿಷ್ಟ ಜಾತಿಯವರ ದೂರಿನ ಮೇರೆಗೆ ಸವರ್ಣೀಯರ ಮೇಲೆ ಎರಡು ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ ೨೩ ಜನ ಸವರ್ಣೀಯರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ. ಕೆರಗೋಡು ಮತ್ತು ಹಲ್ಲೆಗೆರೆಯಲ್ಲಿ ನಡೆದ ಪ್ರಕರಣಗಳಲ್ಲಿ ಸಾಲ್ಕು ಮೊಕದ್ದಮೆಗಳನ್ನು ಸವರ್ಣೀಯರ ವಿರುದ್ಧ ನೋಂದಾಯಿಸಲಾಗಿದೆ. ಹುಲಿಕೆರಿಯಲ್ಲಿ ನಡೆದ ಪ್ರಕರಣದಲ್ಲಿ ಒಂದು ಮೊಕದ್ದಮೆಯನ್ನು ಪರಿಶಿಷ್ಟ ಜಾತಿಯವರ ವಿರುದ್ಧವೂ, ಎರಡು ಮೊಕದ್ದಮೆಯನ್ನು ಸವರ್ಣೀಯರ ವಿರುದ್ಧವೂ ನೋಂದಾಯಿಸಲಾಗಿದೆ ೫೫ ಜನ ಸವರ್ಣೀಯರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಚಿಂಚೋಳಿಯಲ್ಲಿ ನಡೆದ ಪ್ರಕರಣದಲ್ಲಿ ೧೪ ಮೊಕದ್ದಮೆಗಳನ್ನು ಸವರ್ಣೀಯರ ವಿರುದ್ಧ ನೋಂದಾಯಿಸಲಾಗಿದೆ ಮತ್ತು ೧೧೦ ಸವರ್ಣೀಯರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ. ಅಮೃತೂರಿನಲ್ಲಿ ನಡೆದ ಪ್ರಕರಣದಲ್ಲಿ ಆರು ಮೊಕದ್ದಮೆಗಳನ್ನು ಸವರ್ಣೀಯರ ವಿರುದ್ಧ ನೋಂದಾಯಿಸಲಾಗಿದೆ ಹಾಗೂ ೧೫೬ ಸವರ್ಣೀಯರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ.

ದೌರ್ಜನ್ಯದಲ್ಲಿ ತೊಂದರೆಗೀಡಾದ ದುರ್ಬಲ ವರ್ಗದವರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಸ್ಥಳಗಳಲ್ಲಿ ಸೂಕ್ತ ಪೋಲೀಸ್ ಬಂದೋಬಸ್ತನ್ನು ಏರ್ಪಡಿಸಿದ್ದು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಹಾಗೂ ಪರಿಸ್ಥಿತಿಯ ಬಗ್ಗೆ ಆಗಾಗ್ಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿದೆ.

ಚಿಂಚೋಳಿಯಲ್ಲಿ ನಡೆದ ಘಟನೆ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರಾದಂತಹ ಶ್ರೀ ಹಿ. ಜಿ. ಆರ್. ಖಿಂಧ್ಯಾ ರವರು ಭೇಟಿ ನೀಡಿ ತೊಂದರೆಗೀಡಾದ ದುರ್ಬಲ ವರ್ಗದವರನ್ನು ಸಾತ್ಕಸಿ ಪರಿಸ್ಥಿತಿಯ ಬಗ್ಗೆ ಅರಿತು ಪರಿಹಾರ ಧನವನ್ನು ಮಂಜೂರು ಮಾಡಿರುತ್ತಾರೆ. ಇಷ್ಟಲ್ಲದೆ ಪೋಲೀಸರು ಗೋಲಿಬಾರು ಮಾಡಿದ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸಲು ತೀರ್ಮಾನಿಸಿದೆ. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧಿಕಾರಿಗೆ ನ್ಯಾಯಾಧೀಕರನ್ನು ನೇಮಿಸಲು ಪತ್ರ ಬರೆಯಲಾಗಿದೆ.

ಮಂಡ್ಯ ಜಿಲ್ಲೆ ಕೆರಗೋಡು ಮತ್ತು ಹಲ್ಲೆಗೆರೆಯಲ್ಲಿ ನಡೆದ ಘಟನೆ ಬಗ್ಗೆ ಸಂಬಂಧಿಸಿದಂತೆ ಮಾನ್ಯ ಸಚಿವರಾದ ಶ್ರೀ ಕೃಷ್ಣಾರವರು ಸ್ಥಳಕ್ಕೆ ಭೇಟಿ ನೀಡಿ ನೊಂದವರನ್ನು ಖುದ್ದಾಗಿ ಭೇಟಿ ಮಾಡಿ ಪರಿಸ್ಥಿತಿಯನ್ನು ಶಾಂತ ರೀತಿಯಲ್ಲಿರುವಂತೆ ಸಾರ್ವಜನಿಕರಲ್ಲಿ ವಿನಂತಿಸಿ ಕೊಂಡಿರುವುದರೊಂದಿಗೆ ಪರಿಹಾರ ಧನವನ್ನು ಮಂಜೂರು ಮಾಡಿರುತ್ತಾರೆ.

ಇತ್ತೀಚೆಗೆ ರಾಜ್ಯ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳನ್ನು ತಡೆಗಟ್ಟಲು ಹಾಗೂ ಅವರುಗಳ ಹಕ್ಕುಗಳನ್ನು ಕಾಪಾಡಲು ಸರ್ಕಾರವು ಹೆಚ್ಚಿನ ಕಾಳಜಿ ವಹಿಸಿದೆ. ಅವುಗಳನ್ನು ಸೂಕ್ತ ರೀತಿಯಲ್ಲಿ ಕಾಪಾಡುವುದಕ್ಕಾಗಿ ಮತ್ತು ರಕ್ಷಿಸುವುದಕ್ಕಾಗಿ ದಿನಾಂಕ ೩೧–೧೦–೧೯೮೯ ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ೧೯ ಎಸ್‌ಎಸ್‌ಟಿ ೮೯ ಆದರಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಆದರಂತೆ ಪ್ರತಿಯೊಬ್ಬ ಜಿಲ್ಲಾಧಿಕಾರಿಯು ಜಿಲ್ಲಾ ಮಟ್ಟದ ಸಮಿತಿಯ ಮೂಲಕ ನಡವಳಿಗಳ ಒಂದು ಪ್ರತಿಯನ್ನು ಹಾಗೂ ಕೈಗೊಳ್ಳಲಾದ ಪ್ರಮುಖ ನಿರ್ಧಾರಗಳ ಬಗ್ಗೆ ತಿಳಿಸುವ ಮತ್ತು ಅವುಗಳನ್ನು ಜಾರಿಗೊಳಿಸುವಲ್ಲಿನ ಪ್ರಗತಿ ತಿಳಿಸುವ ಮುಖ್ಯ ಪತ್ರದೊಂದಿಗೆ ಸರ್ಕಾರಕ್ಕೆ ಪ್ರತಿ ತಿಂಗಳು ಕಳುಹಿಸಬೇಕೆಂದು ಸೂಚಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿನ್ನೇ ದಿವಸ ಚಿಂಚೋಳಿಯ ಘಟನೆಯ ಮೇಲೆ ಮಾತ್ರ ಹೆಚ್ಚಿನ ವಿವರಗಳನ್ನು ಕೊಟ್ಟಿದ್ದುದು. ಆದರೆ ಇನ್ನೂ ಕೆಲವು ಕಡೆಗಳಲ್ಲಿ ಆಗಿದೆ. ಗಂಜಲಿಖೇಡ್, ಅಲಗೂಡು ಇಲ್ಲಿ ಇಂತಹ ಪ್ರಕರಣಗಳು ಆಗಿದೆ. ಇದಕ್ಕೆ ಮುಖ್ಯವಾದಂಥ ಕಾರಣಗಳು ಏನು ? ಮತ್ತು ಈ ಕಾರಣಗಳನ್ನು ಕಂಡು ಹಿಡಿದು ಅವರಿಗೆ ಪರಿಹಾರ ಕೊಡಕ್ಕೆ ವ್ಯವಸ್ಥೆಯನ್ನು ಸರ್ಕಾರ ಏನು ಮಾಡಿದೆ ? ಈಗ ಉದಾಹರಣೆಗಾಗಿ ಗಂಜಲಖೇಡದಲ್ಲಿ ಸವರ್ಣೀಯರಿಗೂ, ಷೆಡ್ಯೂಲ್ಡ್ ಕ್ಯಾಸ್ಟ್ ನವರಿಗೂ ಘರ್ಷಣೆ ಆಯಿತು. ಕಾರಣ ಏನು ಎಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಹೌಸ್ ಸೈಟ್ಸ್ ಇರಲಿಲ್ಲ. ಗ್ರಾಮಠಾಣ ಇರಕ್ಕೆದ್ದನ್ನು ಹೌಸ್ ಸೈಟ್ಸ್‌ನ್ನಾಗಿ ಮಾಡಬೇಕೆಂದು ಡೆಪ್ಯೂಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರವರು ಪ್ರಯತ್ನಪಟ್ಟಾಗ, ಷೆಡ್ಯೂಲ್ಡ್ ಕ್ಯಾಸ್ಟ್

ಜನ ಊರ ಮುಂದೆ ಬರುತ್ತಾರೆ, ಊರ ಹಿಂದೆ ಇರತಕ್ಕಂಥ ಜನ ಊರ ಮುಂದೆ ಬಂದರೆ ಯಾರಾದರೂ ಊರಿಗೆ ಬಂದರೆ ಅವರ ಮುಖ ನೋಡಬೇಕಲ್ಲ. ಆದ್ದರಿಂದ ಅವರಿಗೆ ಬೇರೆ ಕಡೆಗೆ ಸ್ಥಳ ಕೊಡಿ ಎಂದು ಗಲಾಟೆ ಮಾಡಿ ಮನೆಗಳು ಅಲಾಟ್ ಆಗಿದ್ದನ್ನು, ಪೀಪಲ್ ಹೌಸಿಂಗ್ ಸ್ಕೀಮಿನಲ್ಲಿ ಮಾರ್ಕಿಂಗ್ ಮಾಡಿದ್ದರೂ ಕೂಡ ಅದನ್ನು ಡಿಸ್ಟ್ರಾಯ್ ಮಾಡಿದರು. ಆ ಮೇಲೆ ಪೋಲೀಸ್ ಬಂದೋಬಸ್ತು ಕೆಲವು ದಿವಸ ಮಾಡಿದರು. ಚಿಂಚೋಳಿಯಲ್ಲಿ ನಡೆದ ಘಟನೆಯ ಕಾರಣಕ್ಕೋಸ್ಕರ ಅಲ್ಲಿದ್ದ ಪೋಲೀಸ್ ಬಂದೋಬಸ್ತನ್ನು ವಿತ್‌ಡ್ರಾ ಮಾಡಿದ ಮೇಲೆ ಮರುದಿವಸವೇ ಮನೆಗಳನ್ನು ಸುಡತಕ್ಕದ್ದು. ಕಟ್ಟಿದ ಮನೆಗಳನ್ನು ಕೆಡುವಿಸುವುದನ್ನು ಮಾಡಿದ್ದಾರೆ. ತಮ್ಮ ಗಮನಕ್ಕೆ ಇದನ್ನು ದಲಿತ ಸಂಘರ್ಷ ಸಮಿತಿಯವರು ಮತ್ತು ಲೋಕಲ್ ಕಾಂಗ್ರೆಸ್ ಪಕ್ಷದ ಶಾಸಕರು ತಂದು ಹೇಳಿದರೂ ಕೂಡ, ಟೆಲಿಗ್ರಾಮ್ ಮುಖಾಂತರ, ಪಿಟಿಶನ್ ಮುಖಾಂತರ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೂ ಸರ್ಕಾರ ಯಾವ ನಿರ್ಣಯವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಹೌಸ್ ಸೈಟಿನ ವಿತರಣೆಯನ್ನು ಅಲ್ಲಿಯವರೆಗೆ ತಡೆಹಿಡಿಯಬೇಕು ಎಂದು. ಒಂದು ಡೈರಕ್ಷನ್ ಇನ್ನು ಕೊಟ್ಟಿದ್ದಾರೆ. ಆಲುಗೂಡಿನಲ್ಲಿ ಕೂಡ ಹೌಸ್ ಸೈಟ್‌ಗಳನ್ನು ವಿತರಣೆ ಮಾಡುವಾಗ ಅಲ್ಲಿರತಕ್ಕಂಥ ಪ್ರಭಾವಿ ಜನ ಸರ್ಕಾರಕ್ಕೆ ಬಂದು ಮುಖ್ಯಮಂತ್ರಿಗಳಿಂದ ವಿತರಣೆ ಮಾಡುವುದಕ್ಕೆ ತಡೆಯಾಜ್ಞೆಯನ್ನು ತೆಗೆದುಕೊಂಡರು. ಆಗ ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ಅವರು ಏನು ಹೇಳಿದರು ಎಂದರೆ ಡಿಸ್ಟ್ರಿಬ್ಯೂಶನ್ ಕೂಡ ಬಿಟ್ಟಿದ್ದೇವೆ, ಹಕ್ಕುಪತ್ರಗಳನ್ನು ಕೊಟ್ಟುಬಿಟ್ಟಿದ್ದೇವೆ. ಈಗ ಏನೂ ಮಾಡುವುದಕ್ಕೆ ಬರುವುದಿಲ್ಲವೆಂದು ತಿಳಿಸಿ ದಯವಿಟ್ಟು ಸ್ಟೇ ಆರ್ಡರ್‌ನ್ನು ವೆಕೇಟ್ ಮಾಡಿ ಎಂದು ಅವರು ಕೇಳಿಕೊಂಡರು. ಯಾರೋ ಒಬ್ಬ ಶಾಸಕರು ತಮ್ಮಲ್ಲಿಗೆ ಬಂದು ಒತ್ತಡ ತಂದು ಇವರೆಡನ್ನೂ ನಿಲ್ಲಿಸಿದ್ದಕ್ಕೆ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಈ ದೌರ್ಜನ್ಯಕ್ಕೆ ಒಳಗಾಗಿದ್ದಾರೆ.

ಅಧ್ಯಕ್ಷರು.—ನಿನ್ನೆ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಾಗಿ ಅವರು ಇವತ್ತಿನ ದಿವಸ ಸ್ಟೇ ವೆಕೇಟ್ ಮಾಡಿವುದಕ್ಕೆ, ಸೈಟ್ಸ್ ವಿತರಣೆ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ತಿಳಿಸಬೇಕು. ಎರಡನೆಯದಾಗಿ, ೩೦ ಮನೆಗಳು ಅಲಾಟ್ ಮಾಡಿದುದನ್ನು. ಅರ್ಧ ಕನ್‌ಸ್ಟ್ರಕ್ಷನ್ ಮಾಡಿದ್ದನ್ನು ಡೆಮಾಲಿಶ್ ಮಾಡಿದ್ದಾರೆ. ಇದರಿಂದ ತೊಂದರೆಗೊಳಗಾದವರಿಗೆ ಪುನ: ಪುನರ್ವಸತಿ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಮೂರನೆಯದಾಗಿ, ಹೋದಸಲ ಅಧಿವೇಶನದಲ್ಲಿ, ಯಾವಾಗಲೂ ಇಂತಹ ದೌರ್ಜನ್ಯಗಳು ನಡೆದದ್ದು ಪತ್ರಿಕೆಗಳಲ್ಲಿ ಬಂದತಕ್ಷಣ ಯಾರಾದರೂ ರೆಪ್ರಸೆಂಟೇಶನ್ ಮಾಡಿದ ಮೇಲೆ ಸದನದಲ್ಲಿರತಕ್ಕಂಥ ಅನೇಕ ಸದಸ್ಯರು ಪದೆಪದೇ ಹೇಳುತ್ತಲೇ ಇರುತ್ತಾರೆ. ಹೋದ ಸಲ ಮುಖ್ಯಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ತಾವು ಕೂಡ ಕೊಟ್ಟಿದ್ದೀರಿ. ಇಂತಹ ದೌರ್ಜನ್ಯಗಳನ್ನು ಮಾಡತಕ್ಕಂಥ ವ್ಯಕ್ತಿಗಳ ಮೇಲೆ ಅಥವಾ ಅಂತಹ ಹಳ್ಳಿಗಳ ಮೇಲೆ ನಾವು ಪುಂಡು ಕಂದಾಯ ಹೇರುತ್ತೇವೆ. ಪ್ಯೂನಿಟಿವ್ ಫೈನ್‌ಗೆ ಆಪ್ತುಂಡ್‌ವೆಂಟ್ ತರಂತ್ತೇವೆ, ಈ ಅಧಿವೇಶನದಲ್ಲೇ ತರುತ್ತೇವೆ ಎಂದು ಹೇಳಿದಿರಿ. ಆದರೆ ಇಲ್ಲಿಯವರೆಗೂ ಪುಂಡು ಕಂದಾಯ ಹಾಕತಕ್ಕದ್ದು, ಪೋಲೀಸ್ ಆಕ್ಟ್‌ನಲ್ಲಿ ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿಯನ್ನು ಇಲ್ಲಿಯವರೆಗೂ ತರಲಿಲ್ಲ. ನಾನು ಇವತ್ತು ಪ್ರೈವೇಟ್ ಮೆಂಬರ್ ಬಿಲ್ ಅನ್ನು ಕಳಿಸಿದ್ದೇನೆ. ದಯವಿಟ್ಟು ಅದನ್ನು ತೆಗೆದುಕೊಳ್ಳಿ. ಸರ್ಕಾರ ಪದೆಪದೇ ಇದರ ಬಗ್ಗೆ ಆಶ್ವಾಸನೆಯನ್ನು ಕೊಡುತ್ತದೆಯೇ ಹೊರತು ಇದರ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ಎಲ್ಲಿ ಸೋಷಿಯಲ್ ಬಾಯ್‌ಕಾಟ್ ಹಾಕುತ್ತಾರೆ, ಅಂತಹ ಕಡೆ ಸರ್ಕಾರ ಕೆಲಸ ಕೊಡಬೇಕು. ಯಾವುದಾದರೂ ಒಂದು ಕೆಲಸವನ್ನು ಪ್ರಾರಂಭ ಮಾಡಿಕೊಡಬೇಕು. ಚಿಂಚೋಳಿಯಲ್ಲಿ ಸೋಷಿಯಲ್ ಬಾಯ್‌ಕಾಟ್ ಮಾಡಿದ್ದಾರೆ. ಹಾಗೆಯೇ ಗಂಜಲಖೇಡ್, ಹಲ್ಲೆಗೆರೆಯಲ್ಲಿ ಸೋಷಿಯಲ್ ಬಾಯ್‌ಕಾಟ್ ಮಾಡಿದ್ದಾರೆ. ಆದ್ದರಿಂದ ಪ್ಯೂನಿಟಿವ್ ಫೈನ್ ವಿಧಿಸುವ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಸರ್ಕಾರ ಕೊಡಬೇಕು. ಮತ್ತೆ ಎಲ್ಲಿ ದೌರ್ಜನ್ಯ ನಡೆಸುತ್ತಾರೆ ಅಂತಹವರನ್ನು, ಗೂಂಡಾ ಆಕ್ಟ್ ಪ್ರಕಾರವಾಗಲೀ ಅಥವಾ ಯಾವುದೇ ಕಾನೂನು ಪ್ರಕಾರವಾಗಲೀ ಕ್ರಮ ತೆಗೆದುಕೊಂಡು ಅವರನ್ನು ಗಡೀಪಾರು ಮಾಡಿದರೆ, ನಿಜವಾಗಿಯೂ ಅವರ ಮನಸ್ಸಿನಲ್ಲಿ ಭೀತಿ ಬರುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್ ಜನರ ಮೇಲೆ ದೌರ್ಜನ್ಯ ಮಾಡಲಿವುದಕ್ಕೆ ಭಯಪಡುತ್ತಾರೆ. ದಯವಿಟ್ಟು ಇಂತಹವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುವುದನ್ನು ತಾವು ಮಾಡಬೇಕು. ತಾವೇನೋ ಹೇಳುತ್ತೀರಿ. ಆದರೆ, ಆದರಂತೆ ನಡೆದುಕೊಳ್ಳುವುದಿಲ್ಲ. ಇವತ್ತು ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಇದೆ. ನಾನು ಕೇಳುತ್ತೇನೆ, ಇಷ್ಟೆಲ್ಲಾ ದೌರ್ಜನ್ಯಗಳು ದಿನೇದಿನೇ ಹೆಚ್ಚಿಗೆ ಆಗುತ್ತಾ ಇವೆ. ಅದರಲ್ಲೂ ವಿಶೇಷವಾಗಿ ಜಿಲ್ಲಾಪರಿಷತ್ತು, ತಾಲ್ಲೂಕು ಮಂಡಲ್ ಪಂಚಾಯ್ತಿಗಳು ಬಂದಮೇಲೆ ಇನ್ನೂ ಹೆಚ್ಚಾಗಿದೆ. ನಾನು ಬಹಳ ನೊಂದಮನಸ್ಸಿನಿಂದ ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಬಂದಮೇಲೆ ಹೆಚ್ಚಿಗೆ ಆಗುತ್ತಿವೆ.

ಎಕ್ಸ್‌ಪ್ಲೊಟೇಷನ್ ಬೇರೆಯವರಂ ಮಾಡುತ್ತಾ ಇರಬಹುದು. ಅದಕ್ಕೆ ನೀವು ಕಾರಣರಿದ್ದೀರಿ. ಇನ್ನೊಬ್ಬರು ಕಾರಣ ಇದ್ದಾರೆಂದು ನಾನು ಹೇಳುವುದಿಲ್ಲ. ಆ ಸ್ಥಳದಲ್ಲಿರತಕ್ಕ ಶಾಸಕರಂ ಎಕ್ಸ್‌ಪ್ಲೊಟ್ ಮಾಡುತ್ತಾರೆ. ನಮ್ಮದು ನಡೆಯುತ್ತದೆ, ನಡೆಸಬೇಕು ಎಂದು ಮಾಡುತ್ತಾರೆ. ಅದಕ್ಕಾಗಿ ಇವತ್ತಿನ ದಿವಸ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವುದು ಅವಶ್ಯ ಇದೆ. ಪುಂಡುಗಂದಾಯ ಹಾಕುವುದಂ ಅವಶ್ಯ ಇದೆ. ಎರಡನೆಯದಾಗಿ, ಮುಂಖ್ಯ ಮಂತ್ರಿಗಳು ೩೧-೧೨-೮೯ಕ್ಕೆ ಡೆಪ್ಯೂಟಿ ಕಮೀಷನ್ ಅವರಿಗೆ, ಎಸ್.ಪಿ.ಯವರಿಗೆ ಏನು ಆದೇಶ ಕೊಟ್ಟಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕು ಈ ಸುತ್ತೋಲೆ ಪ್ರಕಾರ ಏನು ಆದೇಶ ಕೊಟ್ಟಿದ್ದಾರೆ ಎಂಬುದು ಬೇಕು. ಮುತ್ತ ಎಷ್ಟರಮಟ್ಟಿಗೆ ಡೆಪ್ಯೂಟಿ ಕಮೀಷನರ್ ಮತ್ತು ಎಸ್.ಪಿ.ಯವರು ಆಕ್ಟ್ ಮಾಡಿದ್ದಾರೆ ಎಂಬುದನ್ನು ಹೇಳಬೇಕು. ಆರ್ಟಿಕಲ್ ೧೭ರ ಪ್ರಕಾರ untouchability is abolished.....ಎಂದು. ಇದಂ ಪುಸ್ತಕದಲ್ಲಿ ಇದೆ, ಕೆಲವು ಪಟ್ಟಣಗಳಲ್ಲಿ ಮಾತ್ರ ಅನುಭವಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಇದೇ ಪರಿಸ್ಥಿತಿ ಇದ್ದೇ ಇದೆ. ನಾನೇನಾದರೂ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಬಗ್ಗೆ ಮಾತನಾಡಿದರೆ, ಇವರು ಯಾವಾಗಲೂ ಇದೇ ಹೇಳುತ್ತಾರೆಂದ ತಿರುಗಿ ಬಿದ್ದರೆ, ನನ್ನ ರಕ್ಷಣೆಗೆ ಬೇರೆಯವರು ಯಾರೂ ಬರುವುದಿಲ್ಲ. ಇಂತಹ ಪರಿಸ್ಥಿತಿ ಇದೆ. ಅದಕ್ಕಾಗಿ ಸರ್ಕಾರ ಮನಸ್ಸು ಮಾಡಿದರೆ ಇದು ಸಾಧ್ಯ. ಯಾವುದೇ ಸರ್ಕಾರ ಇರಲಿ, ಸರ್ಕಾರ ಮನಸ್ಸು ಮಾಡದೇ ಹೋದರೆ, ಈ ದೌರ್ಜನ್ಯಗಳು ನಿಲುವುದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. ಅದಕ್ಕಾಗಿ ನಿನ್ನೆ ನಿಲುವಳಿ ಸೂಚನೆಯನ್ನು ತಂದು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಬರೀ ಚಿಂಚೋಳಿ ಪ್ರಕರಣವನ್ನು ಮಾತ್ರ ಹೈಲೈಟ್ ಮಾಡಿ ಬಿಟ್ಟಿದ್ದಾರೆ. ದಯಮಾಡಿ, ೩೧ನೇ ತಾರೀಖಿನ ಸುತ್ತೋಲೆ ಏನಿದೆ ಅದನ್ನು ಹೇಳಬೇಕು. ಮತ್ತು ಪುಂಡು ಕಂದಾಯದ ಬಗ್ಗೆ ವಿಚಾರ ಮಾಡುತ್ತೀರೋ ಅಥವಾ ಗೂಂಡಾ ಆಕ್ಟ್ ಪ್ರಕಾರ ಅರೆಸ್ಟ್ ಮಾಡಿ, ಶಿಕ್ಷೆ ಕೊಡುತ್ತೀರೋ, ಹೇಗೆ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಿನ್ನೆ ಈ ಬಗ್ಗೆ ಮಾತನಾಡಿದ್ದೇನೆ. ಮುಂಖ್ಯ ಮಂತ್ರಿಗಳು ಸದನದಲ್ಲಿ ಇರಲಿಲ್ಲ. ಈ ಜನತಾ ಸರ್ಕಾರದ ಅವಧಿಯಲ್ಲಿ ಎರಡು ಭಾಗವಾಗಿ ವಿಂಗಡಿಸಿದರೆ, ಒಂದು ಶ್ರೀಮಾನ್ ಹೆಗಡೆಯವರ ಕಾಲದಲ್ಲಿ ಏನೇನು ಆದವು ಮತ್ತು ಇವರು ಮುಂಖ್ಯ ಮಂತ್ರಿಗಳಾದ ಮೇಲೆ ಏನೇನು ಆಗಿವೆ ಎಂಬುದು ಗೊತ್ತಾಗುತ್ತದೆ. ಮತ್ತೆ ಅವೇ ಪುನರ್ ಆವೃತ್ತಿ ಆಗಿವೆಯೇ ಅಥವಾ ನಿಂತಿವೆಯೇ ಎನ್ನುವುದು ಪ್ರಶ್ನೆ. ನಾನು ಒಂದು ಪ್ರಶ್ನೆಯನ್ನು ಹೇಳುತ್ತಿದ್ದೇನೆ.....

ಅಧ್ಯಕ್ಷರು.—ವಿಷಯಕ್ಕೆ ಬನ್ನಿ ಎಂದು ಹೇಳಿದೆ...

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ತಾವೂ ಕೂಡ ಲಾಯರ್ ಆಗಿದ್ದೀರಿ. ಎವಿಡೆನ್ಸ್ ಆಕ್ಟ್ ತಮಗೂ ಗೊತ್ತಿದೆ. ತಾವು ಬಂದ ಮೇಲೆ, ಹಿಂದೆ ಏನು ನಡೆಯುತ್ತಿತ್ತು, ಅದೇ ದೌರ್ಜನ್ಯ. ಅದೇ ಕ್ರೂರತನ.....

ಅಧ್ಯಕ್ಷರು.—ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳಿ.....

ಶ್ರೀ ಬಿ. ಬಸವಲಿಂಗಪ್ಪ.—ಅದನ್ನೇ ಹೇಳುತ್ತಿದ್ದೇನೆ. ಏಕೆ ಇಷ್ಟು ಆವಸರ ಮಾಡುತ್ತಿದ್ದೀರಿ. ನೀವು ಏನು ಹೇಳಿಕೆಯನ್ನು ಕೊಟ್ಟಿದ್ದೀರಿ, ಇದರಲ್ಲಿ ಸವರ್ಣೀಯರು ಎಂಬ ಪದ ಉಪಯೋಗಿಸಿದ್ದೀರಿ. ಸವರ್ಣೀಯರು ಎಂದರೆ ಯಾರು ? ವರ್ಣೀಯರು ಎಂದರೆ ಯಾರು ? ಅವರ್ಣೀಯರು ಎಂದರೆ ಯಾರು ? ಸ್ವಲ್ಪ ಹೇಳಬೇಕು, ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಹೇಳಿದರೆ, ಈ ದೇಶದಲ್ಲಿ ಅವರ್ಣೀಯರೇ, ಸವರ್ಣೀಯರೇ ಅಥವಾ ವರ್ಣೀಯರೇ. ನಾನು ಹಿಂದೆ ಸ್ಟೇಟ್‌ಮೆಂಟ್ ಕೊಡುವಾಗ ನಾವು ಹಿಂದೂ ಸಮಾಜದ ಯಾವ ವರ್ಣಗಳ ವಾದಕ್ಕೂ ಸೇರಿಯೇ ಇಲ್ಲವೆಂದು ಹೇಳಿದೆ. ಅವರು ಸವರ್ಣೀಯರಾದರೆ, ನಮಗೆ ಏಕೆ ಅವರ್ಣೀಯರು ಎಂದು ಹೇಳುತ್ತಾರೆ, ನಮಗೆ ಏನಾದರೊಂದು, ಈ ಸಮಾಜದಿಂದ ದೂರ ಇಟ್ಟಿರತಕ್ಕಂಥವರು ಎಂದು ಕರೆಯಿರಿ. ಈ ಪದ ಉಪಯೋಗಿಸುವುದು ಸ್ವಾರ್ಥ ಮತ್ತು ತುಚ್ಚತನ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಸರ್ಕಾರಕ್ಕೆ ತಾವು ಸಲಹೆ ಕೊಡಿ...

ಶ್ರೀ ಬಿ. ಬಸವಲಿಂಗಪ್ಪ.—ಪೋಲೀಸಿನವರನ್ನು ಇಟ್ಟುಕೊಂಡು, ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಇಟ್ಟುಕೊಂಡು, ಇವರಿಗೆ ಏನೇನು ಅಧಿಕಾರಗಳನ್ನು ಕೊಟ್ಟಿದ್ದೀರಿ ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ. ಅದರ ಮೇಲೆ ವಿವರಣೆ ಕೇಳಿರಿ.

ಶ್ರೀ ಬಿ. ಬಸವಲಿಂಗಪ್ಪ.— ಚಿಂಜೋಳಿ ಘಟನೆಯನ್ನು ಪ್ರಸ್ತಾಪ ಮಾಡಲೇ ? ಅದನ್ನು ಪ್ರಸ್ತಾಪ ಮಾಡಿ ಅದಕ್ಕೆ ಎಲ್ಲಾ ಉತ್ತರ ನನಗೆ ಬೇಕೇ ? ಉತ್ತರ ನನಗೆ ಬೇಕಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ ದಲಿತರು ಏನಿದ್ದಾರೆ ಅವರ ಮೇಲೆ ಆಗತಕ್ಕಂಥ ದೌರ್ಜನ್ಯ ಮತ್ತು ಕ್ರೂರತನ ನಿಲ್ಲಬೇಕೆಂಬು ನನ್ನ ಉದ್ದೇಶ. ಬೇರೆ ರಾಜ್ಯದಲ್ಲಿ ಜಾಸ್ತಿಯಾಗಿದೆ, ನಮ್ಮ ರಾಜ್ಯದಲ್ಲಿ ಕಡಿಮೆಯಾಗಿದೆ ಎಂಬುದು ಅಲ್ಲ. ಅದು ದೊಡ್ಡ ಕಳ್ಳತನ ಇದು ಸಣ್ಣ ಕಳ್ಳತನವೇ ? ಇದನ್ನು ಮಾಡಬಾರದು ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ನೀವು ಮುಖ್ಯಮಂತ್ರಿಗಳಾದ ಮೇಲೆ ಇದು ನಿಲ್ಲಬೇಕು. ನಾನೂ ಸಹ ಹಿಂದೆ ಐದು ವರ್ಷ ಡೆಪ್ಯುಟಿ ಹೋಮ್ ಮಿನಿಸ್ಟರ್ ಆಗಿದ್ದೆ. ಆ ನಾಲ್ಕೂವರೆ ವರ್ಷದ ಅವಧಿಯಲ್ಲಿ ಇಂತಹ ದೌರ್ಜನ್ಯಗಳು ಇರಲಿಲ್ಲ. ಇಂತಹ ದೌರ್ಜನ್ಯ ನಡೆಯಬೇಕಾದರೆ ಅವಕ್ಕೆ ಅಧಿಕಾರ ದಲ್ಲಿರುವವರ ಸಹಕಾರ ಇರಲೇ ಬೇಕು. ಯಾರು ಮುಖ್ಯಮಂತ್ರಿ ಇರುತ್ತಾರೆ ಅಂತಹವರ ಬೆಂಬಲ ದಿಂದಲೇ ಕ್ರೂರತ್ವ ಮಾಡುತ್ತಿದ್ದಾರೆ. ಅಂತಹವರ ಬೆಂಬಲ ಇದಕ್ಕೆ ಇರಲೇ ಬೇಕು. ಇಲ್ಲದೇ ಹೋದರೆ ಇದು ಆಗುವುದೇ ಇಲ್ಲ. ಯಾರು ಕ್ರೂರತ್ವಕ್ಕೆ ಒಳಪಟ್ಟಿದ್ದಾರೆ ಅವರಿಗೆ ಜಾಸ್ತಿ ಸಹಾಯ ಮಾಡಬೇಕು. ಪುನರ್ವಸತಿ ಕೊಡಬೇಕು ಯಾರು ಯಾರು ದೌರ್ಜನ್ಯ ಮಾಡುತ್ತಿದ್ದಾರೆ ಅಂಥವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಸಡಿಲವಾದ ಕ್ರಮ ತೆಗೆದುಕೊಂಡರೆ ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅದುದರಿಂದ ನೀವು ನಿನ್ನೆ ದಿವಸ ಏನು ಹೇಳಿಕೆ ಕೊಟ್ಟಿದ್ದೀರಿ ಅದು ಪತ್ರಿಕೆಯಲ್ಲಿ ಬಂದಿದೆ. ಏನೇನು ಮಾಡುತ್ತೇವೆಂದು ತಾವು ಹೇಳಿದ್ದೀರಿ, ಅದು ಇವತ್ತು ಪತ್ರಿಕೆಯಲ್ಲಿ ಬಂದಿದೆ. ಆದರೆ ಪುನಃ ಇವತ್ತು ಇದು ಪುನರಾವೃತ್ತಿಯಾಗಿದೆ. ಇದೇನೂ ಹೊಸದಲ್ಲಿ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳುತ್ತೇನೆ, ನೀವು ಎಲ್ಲಿಯವರೆಗೆ ಇರುತ್ತೀರಿ, ಆಲ್ಲಿಯವರೆಗೆ ದಲಿತರ ಮೇಲೆ ಕ್ರೂರತ್ವದ ವರ್ತನೆ ಏನಿದೆ. ಅದು ನಿಲ್ಲಬೇಕು ದಲಿತರು ಮತ್ತು ದಲಿತರಲ್ಲದವರು ಎಂದು ಹೇಳಿ. ದಲಿತರು ಅಥವಾ ಎಸ್.ಸಿ. ಎಂದು ಹೇಳಿರಿ. ದಲಿತರು ಅಥವಾ ಎಸ್.ಸಿ.ಗಳ ಮೇಲೆ ಎಸ್.ಸಿ. ಅಲ್ಲದವರು ಅಥವಾ ದಲಿತರಲ್ಲದವರು ಏನು ಇವತ್ತು ದೌರ್ಜನ್ಯ ನಡೆಸುತ್ತಿದ್ದಾರೆ ಅದು ಕೊನೆಯಾಗಬೇಕು. ಕೊನೆಯಾಗದೇ ಹೋದರೆ ಸರಕಾರದ ಬೆಂಬಲ ಕ್ರೂರತ್ವ ಮಾಡುವವರಿಗೆ ಇದೆ ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಸಿದ್ಧಾಂತಗಳನ್ನು ಹೇಳತಕ್ಕಂಥಾದ್ದು ಬಹಳ ಸುಲಭ. ಬಸವಲಿಂಗಪ್ಪನವರ ಕಾಲದಲ್ಲೂ ಇದು ಹೆಚ್ಚಾಗಿ ಆಗಿದೆ. ನಾನು ಬೇಕಾದರೆ ಅಂಕಿ ಸಂಖ್ಯೆ ತೋರಿಸುತ್ತೇನೆ. ಹಿಂದಿನ ಸರಕಾರದಲ್ಲಿ ಎಷ್ಟಾಗಿದೆ ಅದರ ಅಂಕಿ ಸಂಖ್ಯೆ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಕೊಡಿ, ನಾನು ಇದ್ದಾಗ ಏನಾಗಿದೆ ಕೊಡಿ.

ಅಧ್ಯಕ್ಷರು.—ಬಸವಲಿಂಗಪ್ಪನವರೇ ಕೇಳಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಸತತವಾಗಿ ಹೇಳುತ್ತಿದ್ದೇನೆ. ಇದರಲ್ಲಿ ರಾಜಕೀಯ ಬೆರೆಸಬೇಡಿ. ಮಾನ್ಯ ಖರ್ಗೆಯವರು ಹೇಳಿದ್ದಾರೆ. ಜನತಾ ಸರಕಾರ ಬಂದಮೇಲೆ, ಜನತಾ ದಾದ ಸರಕಾರ ಬಂದ ಮೇಲೆ ಹೆಚ್ಚು ಆಗಿದೆ ಎಂದು ಅದು ತಪ್ಪು. ಹಿಂದೆ ಇದಕ್ಕಿಂತ ಹೆಚ್ಚಾಗಿದೆ. ಬೇರೆ ರಾಜ್ಯದಲ್ಲಿ ಇದಕ್ಕಿಂತ ಹೆಚ್ಚಾಗಿದೆ. ಇದು ಆಗಕೂಡದು. ಒಂದು ಘಟನೆಯೂ ಆಗಕೂಡದು. ಒಂದು ಎರಡು ಮೂರು ಘಟನೆ ಆಗಬೇಕೆಂಬುದಲ್ಲ ಆಗಲೇಬಾರದು. ನಿಮ್ಮ ಕಾಲದಲ್ಲೂ ಆಗಿದೆ. ಇದು ಸಹಸ್ರಾರು ವರ್ಷಗಳಿಂದ ಬಂದರಾದ್ದು.

ಶ್ರೀ ಬಿ. ಬಸವಲಿಂಗಪ್ಪ.—ಹಿಂದಿನದಕ್ಕೆ ಹೋಲಿಕೆ ಮಾಡಿಕೊಂಡು ನಾವು ಚೆನ್ನಾಗಿ ಮಾಡಿದ್ದೀವಿ ಎಂದು ಹೇಳುವುದನ್ನು ಬಿಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೀವು ಹೇಳಿದಕ್ಕೆ ಹೇಳಬೇಕಾಗುತ್ತದೆ. ನೀವು ಮಂತ್ರಿ ಗಳಾಗಿದ್ದಾಗ ಮಾಡಿದ್ದೂ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಏನು ಮಾಡಿದ್ದೇನೆ ಹೇಳಿರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅನ್‌ಟಚಬಿಲಿಟಿ ಆಗಲೂ ಇತ್ತು. ನೀವುಮಂತ್ರಿ ಆದ ಕೂಡಲೇ ಅದು ಹೋಗುತ್ತದೆ ಎಂದು ಅಲ್ಲ. ನಿಮ್ಮರ್ಥವರು ಇದ್ದಾಗ ಹೆಚ್ಚಾಗಿದೆ. ನಿಮ್ಮರ್ಥವರಿಂದಲೇ ಇದು ಹೆಚ್ಚಾಗಿರುವುದು. I will prove it. ನಿಮ್ಮ ಚಾಂಪಿಯನ್‌ಷಿಪ್ ನನಗೆ ಗೊತ್ತಿದೆ.

ಅಧ್ಯಕ್ಷರು.—ತಾವು ಕೂಡಿರಿ ಬಸವಲಿಂಗಪ್ಪನವರೇ, ಏತಕ್ಕೆ ಇವತ್ತು ಇಷ್ಟು ಕೋಪ ವಾಗಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಲಿತ ನಾಯಕರಿಗಿರತಕ್ಕಂಥ ಕಳಕಳಿಯನ್ನು ನಾನು ಮೆಚ್ಚಿ ಕೊಳ್ಳುತ್ತೇನೆ. ನನ್ನಲ್ಲೇನು ಅದಕ್ಕಿಂತ ಕಡಿಮೆ ಕಳಕಳಿ ಇಲ್ಲ, ಅದಕ್ಕಿಂತ ಹೆಚ್ಚಾಗಿದೆ. ನಾನು ಯುವಕ

ನಾದಾಗಿನಿಂದ ಇದರ ಬಗ್ಗೆ ಹೋರಾಟ ಮಾಡಿದ್ದೇನೆ. ಸರಕಾರದಲ್ಲಿ ಇದ್ದಾಗಲೂ ಹೋರಾಟ ಮಾಡಿದ್ದೇನೆ, ಅದನ್ನು ತೋರಿಸುತ್ತೇನೆ. ರಾಜಕೀಯ ಭಾಷಣ ಬೇಡ. ಖರ್ಗೆಯವರೂ ಸಹ ಚೆನ್ನಾಗಿ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ರಾಜಕೀಯ ಯಾರದ್ದೂ ಇಲ್ಲಿ ಇಲ್ಲ.

SRI M. MALLIAKRAJUNA KHARGE.— Why the Chief Minister is taking personally, The man answer as a re presentetive of the Goverment,

ಅಧ್ಯಕ್ಷರು.—ಬಸವಲಿಂಗಪ್ಪನವರೇ ಕುಳಿತುಕೊಳ್ಳಿರಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಬಸವಲಿಂಗಪ್ಪನವರು ಹೇಳಿದರು, ನಾನು ಮುಖ್ಯಮಂತ್ರಿಯಾದ ಮೇಲೆ ಕ್ರೂರತ್ವ ಹೆಚ್ಚಾಗಿದೆ ಎಂದರು. ಅದನ್ನು ಹೇಳುವಾಗ ಬಹಳ ಎಚ್ಚರಿಕೆಯಿಂದ ಹೇಳಬೇಕು. ನೀವು ಇದ್ದಾಗ ಇದು ಹೆಚ್ಚಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೇಳಿ, ಚಿಂಚೋಳಿದು ಕ್ರೂರತನ ಅಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ,—ನಿಮ್ಮಿಂದ ದಲಿತರ ಸುಲಿಗೆ ಆಗಿದೆ, ನಿಮ್ಮಿಂದ ದಲಿತರ ಸುಲಿಗೆ ಹೆಚ್ಚಾಗಿದೆ.

ಶ್ರೀ ಬಿ. ಬಸವಲಿಂಗಪ್ಪ:—ನನಗೆ ಸುಲಿಗೆ ಮಾಡುವುದಕ್ಕೆ ಹಕ್ಕು ಉಂಟು ನಿಮಗೆ ಏನು ಉಂಟು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುತ್ತೇನೆ. ಈ ರೀತಿ ಹೇಳುವುದನ್ನು ಬಿಟ್ಟು ಬಿಡಿ. You are exploiting Dalits...

SRI B. BASAVALINGAPPA.—Don't tlak * *

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮುಖ್ಯ ಮಂತ್ರಿಗಳು ಏನು ರಬ್ಬಿಷ್ ಮಾತನಾಡಿದರು ? Don't talk * * What does he mean ? It cannot go into record. ರಬ್ಬಿಷ್ ಎಂದು ಮುಖ್ಯ ಮಂತ್ರಿಗಳಿಗೆ ಈ ರೀತಿ ಹೇಳುವುದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ.—ನನಗೆ ರೈಟ್ಸ್ ಇದೆ. ನೀವು ನನಗಿಂತ ಕಡಿಮೆ ಏನೂ ಸುಲಿಗೆ ಮಾಡಿಲ್ಲ.

ಅಧ್ಯಕ್ಷರು,—ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ದಲಿತರ ಸಮಸ್ಯೆ ಬಹಳ ಸೂಕ್ಷ್ಮವಾದ ಸಮಸ್ಯೆ. ಈ ಸೂಕ್ಷ್ಮ ಸಮಸ್ಯೆಯನ್ನು .....

ಶ್ರೀ ಜಿ. ನಾರಾಯಣ ಕುಮಾರ್.—ಮೈಸೂರು ಮಹಾರಾಜರು ಸತ್ತು ಹೋದರು. ನೀವು ಮಾಡಬಾರದ ಅನ್ಯಾಯ ಮಾಡಿ ದಲಿತರ ಬಗ್ಗೆ ಮಾತನಾಡಿದರೆ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ ?

ಅಧ್ಯಕ್ಷರು.—ನಾರಾಯಣ ಕುಮಾರ್‌ರವರೆ, ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ರಾಜ್ಯಾಂಗದಲ್ಲಿ ಹೇಳಿದ್ದೇವೆ. ಅದು ಬರೀ ಪುಸ್ತಕದಲ್ಲಿ ಉಳಿದರೆ ಸಾಲದು. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಅದನ್ನು ಕಾರ್ಯಗತ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಯಾವ ದಿಶೆಯಲ್ಲಿ ಆಗಬೇಕೆನ್ನುವುದು ಮುಖ್ಯ. ಇವತ್ತು ನಮ್ಮ ಸಮಾಜ ಮತ್ತು ಸರ್ಕಾರ ಎರಡು ಸೇರಿ ಈ ಕೆಲಸ ಮಾಡಬೇಕಾಗಿದೆ. ಸವರ್ಣೀಯರು ದಲಿತರ ಮೇಲೆ ಮಾಡತಕ್ಕಂಥ ದೌರ್ಜನ್ಯ ಘರ್ಷಣೆ ಕಡಿಮೆ ಆಗಬೇಕೆನ್ನುವ ತಿಳುವಳಿಕೆ ಅವರಲ್ಲಿ ಬರಬೇಕು. ಈ ಒಂದು ಶಾಪ ಈ ಜನಾಂಗಕ್ಕೆ ಈ ರಾಷ್ಟ್ರದಲ್ಲಿ ಈ ಸಮಾಜದಲ್ಲಿ ಇಲ್ಲದಂತೆ ಮಾಡುವ

** Expanged as ordered by the Chair.

ಪ್ರಜ್ಞೆ ಮೂಡಿಸಲು ನಾವೆಲ್ಲಾ ಪ್ರಯತ್ನ ಮಾಡಬೇಕು. ಸವರ್ಣೀಯರಲ್ಲಿ ಈ ಒಂದು ಮನೋವೃತ್ತಿ ಬೆಳೆಯಬೇಕು. ಅದೇ ರೀತಿಯಲ್ಲಿ ದಲಿತರಲ್ಲಿಯೂ ಕೂಡ ಅದು ನಮ್ಮ ಹಕ್ಕು ಆ ಹಕ್ಕನ್ನು ನಾವು ಶಾಂತಿ ರೀತಿಯಿಂದ ಪಡೆದುಕೊಳ್ಳಬೇಕೆಂಬ ಭಾವನೆ ಬರಬೇಕು. ನಿನ್ನೆಯ ದಿವಸ ಅಲ್ಲಿನ ಶಾಸಕರು ನನಗೆ ಹೇಳಿದರು, ಅದನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಿಲ್ಲ. ಘಟನೆ ನಡೆದ ಸ್ಥಳಕ್ಕೆ ಎಸ್.ಐ. ಹೋದಾಗ ದಲಿತ ಯುವಕರು ಆ ಎಸ್. ಐ. ಮೇಲೆ ಹಲ್ಲೆ ಮಾಡಿದ್ದಾರೆ. ಇದು ಸರಿಯಲ್ಲ. ಆದ್ದರಿಂದಲೇ ನಾವು ಈ ಬಗ್ಗೆ ನಮ್ಮ ಸಮಾಜದಲ್ಲಿ ಪ್ರಜ್ಞೆ ಮೂಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಎಂದು ಹೇಳುವುದು ಇದರಲ್ಲಿ ಸರ್ಕಾರದ ಕರ್ತವ್ಯವೂ ಸಹ ಇದೆ. ಅದಕ್ಕೆ ನಾವು ಕಾನೂನು ತಿದ್ದುಪಡಿ ಮಾಡಬೇಕಾಗಿದೆ, ಕಾನೂನು ತಿದ್ದುಪಡಿ ಮಾಡುತ್ತೇವೆ. ಅದನ್ನು ನಾವು ಈಗ ಪರಿಶೀಲನೆ ಮಾಡುತ್ತಿದ್ದೇವೆ, ಮಾಡಬಾರದೆಂದು ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಪ್ರೊಸೀಡಿಂಗ್ಸ್ ತರಿಸಿ ನೋಡಿ. Assurances were given thrice. Please go thourgh the procedings of this House. Ultimately I am bringing a Private Members Bill.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಯುನಿಯನ್ ಹೋಮ್ ಮಿನಿಸ್ಟರ್ ಜೊತೆ ಚರ್ಚೆ ಮಾಡಿದ್ದೇನೆ. ರಾಷ್ಟ್ರದಲ್ಲಿ ಇಂತಹ ಒಂದು ಕಾನೂನು ಬೇಕು. ನಾವು ರಾಜ್ಯದಲ್ಲಿಯೂ ಸಹ ಮಾಡುತ್ತೇವೆಂದು ಹೇಳಿದ್ದೇನೆ. ಆದಕ್ಕೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ನೀವು ಪ್ರೈವೇಟ್ ಮೆಂಬರ್ಸ್ ಬಿಲ್ ತಂದರೆ ಏನೂ, ಸರ್ಕಾರ ತಂದರೆ ಏನು? ಇಲ್ಲಿ ನಾವು ಕಾನೂನು ಮಾಡತಕ್ಕಂಥದ್ದು ಒಂದು. ಮತ್ತು ನಿನ್ನೆ ಹೇಳಿದ ವಿಚಾರ ಪುನ: ನಾನು ಇಲ್ಲಿ ಹೇಳುವುದು ಬೇಡ. ಇನ್ನು ಗೂಂಡಾಗಿರಿ ಯಾರ ಮೇಲೆ ಮಾಡಲಿ—ದಲಿತರ ಮೇಲೆ ಆಗಲಿ, ಸವರ್ಣೀಯರ ಮೇಲೆ ಆಗಲಿ, ಯಾರ ಮೇಲೆ ಗೂಂಡಾಗಿರಿ ಮಾಡಿದರೂ ಸಹ ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಗೂಂಡಾಗಿರಿಗೆ ಜಾತಿ ಇಲ್ಲ, ಸರ್ಕಾರ ಕಾನೂನನ್ನು ಜಾರಿ ಮಾಡಲೇಬೇಕು. ಅದರಲ್ಲಿ ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ಇನ್ನು ತಾವು ಕಾನೂನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದೀರಿ. ಆ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ದಲಿತರ ಬಗ್ಗೆ ದಲಿತ ನಾಯಕರಿಗೆ ಎಷ್ಟು ಅನುಕಂಪ ಇದೆಯೋ ಅದಕ್ಕಿಂತ ಹೆಚ್ಚು ಅನುಕಂಪ ಸರ್ಕಾರಕ್ಕೆ ಇದೆ. ಮತ್ತು ಅವರಿಗೆ ನ್ಯಾಯ ಕೊಡುವುದರಲ್ಲಿ ಹಿಂದೆ ಮುಂದು ನೋಡುವುದಿಲ್ಲ ಇನ್ನು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಅದೇನೆಂದರೆ ಮಾನ್ಯ ಖರ್ಗೆಯವರು ಲ್ಯಾಂಡ್ ಅಕ್ವೈರ್ ಮಾಡಿರುವ ಬಗ್ಗೆ ಹೇಳಿದ್ದಾರೆ, ಊರ ಮುಂದೆ ಆ ಲ್ಯಾಂಡ್ ಇದೆ ಎಂದು ಕೆಲವರು ಅಡ್ಡಿ ಮಾಡುತ್ತಿದ್ದಾರೆ, ಅದನ್ನು ಅವರಿಗೆ ಕೊಡಬೇಕೆಂದು ಹೇಳಿದ್ದಾರೆ, ಆ ಬಗ್ಗೆ ಸರ್ಕಾರ ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತದೆ: ಮತ್ತು ಪಂಚಕಟ್ಟಿಸಿಕೊಡಲಿಕ್ಕೆ ಹೇಳಿದ್ದಾರೆ ಅದನ್ನು ಮಾಡೋಣ. ಇನ್ನು ಮುಂದೆ ಎಲ್ಲಿ ನಾವು ಮನೆಗಳನ್ನು ಹೆಂಚುತ್ತೇವೆಯೋ ಅಲ್ಲಿ ಈ ವರ್ಗದವರಿಗೆ ಆದ್ಯತೆ ಕೊಡಬೇಕೆಂದು ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ತಮ್ಮಲ್ಲಿಯೇ ಸ್ಟೇ ಆಗಿದೆ. ಎ.ಸಿ.ಯವರು ಬಂದು ರಿಕ್ವೆಸ್ಟ್ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಹೇಳಿದ್ದಾರೆ. ನಾನು ನೋಡಿ ಕ್ರಮ ಕೈಗೆದುಕೊಳ್ಳುತ್ತೇನೆ. ಇಂತಹ ಘಟನೆಗಳು ನಡೆಯಬಾರದೆನ್ನುವ ಪ್ರಜ್ಞೆ ಮೂಡಿಸಬೇಕಾಗುತ್ತದೆ. ಅವರ ಮೇಲೆ ಇವರ ಮೇಲೆ ಎಂದು ನಾನು ಹೇಳುವುದಿಲ್ಲ: ಎಲ್ಲರೂ ಕೂಡಿ ಈ ಕೆಲಸವನ್ನು ಮಾಡಬೇಕು. ನಾನು ನಿಮ್ಮ ಸಹಕಾರವನ್ನು ಕೇಳುತ್ತಿದ್ದೇನೆ. ಇದರಲ್ಲಿ ನಮ್ಮ ಸರ್ಕಾರದ ಜವಾಬ್ದಾರಿ ಹೆಚ್ಚು ಇದೆ. ಇದಕ್ಕೆ ನಿಮ್ಮ ಸಹಕಾರ ಬೇಕು. ಅವರಿಗೆ ಸೂಕ್ತ ತಿಳುವಳಿಕೆ ಕೊಡಲು ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ಅಲ್ಲಿ ತಿಳಿ ವಾತಾವರಣವನ್ನು ಮೊದಲು ನಿರ್ಮಾಣ ಮಾಡೋಣ. ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ಸಂಸ್ಕೃತಿ, ತಾಳ್ಮೆ, ಸಹನೆ ಹೆಚ್ಚು ಇದೆ. ಈ ಬಗ್ಗೆ ತಾವು ಹೇಳಿದ ಎಲ್ಲಾ ವಿಚಾರಗಳ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ.

(ii) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹಳೆಯ ಹುಬ್ಬಳ್ಳಿ ಭಾಗದಲ್ಲಿ ಕಟ್ಟಡಗಳನ್ನು ಕೆಡವಿ ಹಾಕಿರುವ ಬಗ್ಗೆ

ಶ್ರೀ ಎಂ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಹಳೇ ಹುಬ್ಬಳ್ಳಿ ಭಾಗದಲ್ಲಿ ಕಟ್ಟಡಗಳನ್ನು ಕೆಡವಿ ಹಾಕಿರುವ ಬಗ್ಗೆ ನಾನು ಮಾನ್ಯ ಪಶಾತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.